ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.3935/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ವೀಣಾಕ್ಷಿ** | | |
| **ಗಂಡನ ಹೆಸರು** | **ಸೋಮಲಿಂಗಪ್ಪ** | **ಪಿಡಬ್ಲೂ:** | **1** |
| **ವಯಸ್ಸು** | **29 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗಃ** | **ಗೃಹಿಣಿ** | | |
| **ವಾಸ ಸ್ಥಳಃ** | **ಬೆಳಗುರ್ಕಿ.** | | |

**ದಿನಾಂಕ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 1 & 3 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-2 ನನ್ನ ತಾಯಿ, ಚಾಸಾ-3 ನನ್ನ ತಂದೆ. ಚಾಸಾ-4 ರಿಂದ 6 ನಮ್ಮ ಗ್ರಾಮಸ್ಥರು. ಚಾಸಾ-7 & 8 ಬೆಳಗುರ್ಕಿ ಗ್ರಾಮದವರು. 1 ನೇ ಆರೋಪಿ ನನ್ನ ಗಂಡ. ಉಳಿದ ಆರೋಪಿತರು 1 ನೇ ಆರೋಪಿಯ ಸಂಬಂಧಿಕರು.

ನಾನು ವಿದ್ಯಾಭ್ಯಾಸ ಮಾಡುವ ಕಾಲಕ್ಕೆ ನಾವು ಪ್ರೀತಿಸಿದ್ದೆವು. ದಿ.29-05-2020 ರಂದು ಬೆಳಗುರ್ಕಿಯ ನನ್ನ ಗಂಡನ ಮನೆಯ ಮುಂದೆ ಸಂಪ್ರದಾಯದ ಪ್ರಕಾರ 1 ನೇ ಆರೋಪಿಯೊಂದಿಗೆ ಮದುವೆ ಆಗಿತ್ತು. ನಂತರ ಬೆಳಗುರ್ಕಿಯ ಗಂಡನ ಮನೆಯಲ್ಲಿ ವಾಸವಿದ್ದೆನು. ನನಗೆ 2 ವರ್ಷದ ಮಗಳು ಇದ್ದಾಳೆ, ಆಕೆಯ ಹೆಸರು ಖುಷಿ.

ಮದುವೆಯಾದ 1 ವರ್ಷಗಳ ಕಾಲ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು. ತದ ನಂತರ ನನ್ನ ಅತ್ತೆ, ನಾದಿನಿಯ ಮಾತು ಕೇಳಿ ನನ್ನ ಮೇಲೆ ಸಂಶಯಪಡಲು ಶುರುಮಾಡಿದರು. ಮೂರು ಜನ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಪ್ರತಿ ದಿನ ಹೊಡೆ ಬಡೆ ಮಾಡುತ್ತಿದ್ದರು. ಲೇ ಸೂಳೆ ಮನೆ ಬಿಟ್ಟು ಹೋಗು ಎಂದು ಮೂರು ಜನ ಆರೋಪಿತರು ಬೈಯ್ಯುತ್ತಿದ್ದರು. ಸದರಿ ವಿಷಯವನ್ನು ಒಂದು ಸಾರಿ ನನ್ನ ತವರು ಮನೆಯವರಿಗೆ ಹೇಳಿದೆನು. ನನ್ನ ತಂದೆ ತಾಯಿ ನಾವು ಮಾತನಾಡಿ ಸರಿಮಾಡುತ್ತೇವೆ ಎಂದು ಹೇಳಿದ್ದರು. ನಂತರವೂ ಸಹ ದಿನ ಕುಡಿದು ಬಂದು ಹೊಡೆಯುತ್ತಿದ್ದರು.

ದಿ.14-06-2023 ರಂದು ರಾತ್ರಿ 7 ಗಂಟೆಗೆ 2 & 3ನೇ ಆರೋಪಿತರ ಮಾತು ಕೇಳಿ, ನೀನು ಸರಿ ಇಲ್ಲ ಸೂಳೆ, ನಿನ್ನ ಮನೆಯವರೂ ಸಹಿ ಇಲ್ಲ, ಹಂಗಾಗಿಯೇ ನೀನು ಪ್ರೀತಿಸಿ ಮದುವೆ ಆಗಿದ್ದೀಯಾ, ನೀನು ಊರಿನಲ್ಲಿರುವ ಹುಡುಗರೊಂದಿಗೆ ಮಾತನಾಡುತ್ತೀಯ, ಹಂಗಾಗಿ ನೀನು ಮನೆ ಬಿಟ್ಟು ಹೋಗು ಎಂದು ಆರೋಪಿತರು ಹೊಡೆದಿದ್ದರು. ಅದನ್ನು ಕೇಳಿಸಿಕೊಂಡ ಆರೋಪಿತರ ಸಂಬಂಧಿ ಯರಿಯಪ್ಪ ತಂದೆ ನಾಗಪ್ಪ ನನ್ನ ಮಾತನ್ನು ಕೇಳಿಸಿಕೊಳ್ಳದೆ, ನಿನ್ನ ನಡತೆ ಸರಿ ಇಲ್ಲ, ನೀನು ಮನೆ ಬಿಟ್ಟು ಹೋಗು, ಆತನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಪ್ರಚೋದನೆ ಕೊಟ್ಟಿದ್ದರು. ಅದಕ್ಕೆ ನನ್ನ ಗಂಡ ನನಗೆ ಮತ್ತು ನನ್ನ ಮಗಳಿಗೆ ಹೊಡೆದು ಮನೆಯಿಂದ ಹೊರಹಾಕಿದ್ದರು, ಆದ್ದರಿಂದ ನಾನು ತವರು ಮನೆಗೆ ಬಂದಿರುತ್ತೇನೆ. ಜಗಳವಾದ ಮರುದಿನ ಪಂಚಾಯಿತಿ ಮಾಡಿ ಸರಿಮಾಡೋಣ ಎಂದು ನನ್ನ ತಂದೆ-ತಾಯಿ, ವೀರೇಶ್, ವೆಂಕಣ್ಣ, ಸಿದ್ಧಣ್ಣ ರವರನ್ನು ಕರೆದುಕೊಂಡು ಬೆಳಗುರ್ಕಿ ಗ್ರಾಮಕ್ಕೆ ಹೋದೆವು. ಆರೋಪಿತರು ನಮ್ಮೆಲ್ಲರಿಗೂ ಅವಾಚ್ಯ ಶಬ್ದಗಳಿಂದ ಬೈಯ್ಯಲು ಶುರು ಮಾಡಿದರು. ಈ ಸೂಳೆ ನಡತೆ ಸರಿ ಇಲ್ಲ, ಈಕೆಗೆ ಏನೂ ಕೆಲಸ ಬರುವುದಿಲ್ಲ, ಕರೆದುಕೊಂಡು ಹೋಗಿ, ನಮ್ಮ ಹುಡುಗನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಹೇಳಿದ್ದರು. ಅದಕ್ಕೆ ನನ್ನ ಗಂಡ ನೀನು ಮತ್ತು ನಿನ್ನ ಮಗಳು ಇಲ್ಲಿಯೇ ಇದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದನು.

ನಂತರ ಎಷ್ಟೇ ಪಂಚಾಯಿತಿ ಮಾಡಿದರೂ ಅವರನ್ನು ಸರಿಪಡಿಸಲು ಆಗದೇ ಇದ್ದಿದ್ದರಿಂದ ನಾನು ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಮರುದಿನ ದಿ.27-09-2023 ರಂದು ಪೋಲೀಸರು ಸ್ಥಳಕ್ಕೆ ಬಂದಿದ್ದರು, ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರಾದ ಚಾಸಾ-9 & 10 ರವರ ಸಮಕ್ಷಮ ಪೋಲೀಸರು ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಮಾಡಿ ನನ್ನ ಸಹಿ ಪಡೆದರು. ಸಾಕ್ಷಿಯು ಪಂಚನಾಮೆಯನ್ನು

ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸದ್ದು, ಪಂಚನಾಮೆಯನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

ನಾನು ಪೋಲೀಸರಿಗೆ ನನ್ನ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಜಗಳವಾದ ದಿನ 1ನೇ ಆರೋಪಿ ನಿನ್ನೊಂದಿಗೆ ಸಂಸಾರ ಮಾಡಲು ಇಷ್ಟವಿಲ್ಲ, ನಿನ್ನ ಮಗಳನ್ನು ಕರೆದುಕೊಂಡು ಹೋಗು ಎಂದು ಬೈದು, ಮೂರು ಜನ ಆರೋಪಿತರು ಸೇರಿ ಕಟ್ಟಿಗೆಯಿಂದ ಹೊಡೆದಿದ್ದರು ಎಂದರೆ ಸರಿ.

ದಿ.27-09-2023 ರಂದು ಕೊಟ್ಟ ಹೇಳಿಕೆಯಲ್ಲಿ ಆರೋಪಿತರು ನಿಮಗೆ ಹೊಡೆಯುತ್ತಿದ್ದಾಗ ನಾನು ಚೀರಿಕೊಂಡಾಗ ಆರೋಪಿತರಿಗೆ ನಿಮಗೆ ಹೊಡೆಯಬೇಡಿ ಮತ್ತು ಮನೆಯಿಂದ ಹೊರಗೆ ಹಾಕಬೇಡಿ ಎಂದು ಪ್ರಚೋದನೆ ಮಾಡಿರುತ್ತಾರೆಂದು ದೂರಿನಲ್ಲಿ ನಮೂದಿಸಿದ್ದು, ಯರಿಯಪ್ಪರವರು ಆ ಕಾಲಕ್ಕೆ ಅಲ್ಲಿಗೆ ಬಂದಿರುವುದಿಲ್ಲ, ಅವರೇ ಮಧ್ಯಸ್ಥಿಕೆ ವಹಿಸಿ, ನಿಮ್ಮ ಮದುವೆ ಮಾಡಿದ್ದರಿಂದ ಆತನ ವಿರುದ್ಧ ದೂರು ಕೊಟ್ಟಲ್ಲಿ ನಿಮ್ಮ ಸಂಸಾರ ಸರಿ ಹೋಗಬಹುದು ಎಂದು ತಪ್ಪು ಗ್ರಹಿಕೆಯಿಂದ ಆತನ ಹೆಸರು ದೂರಿನಲ್ಲಿ ನಮೂದಿಸಿದ್ದಿರಿ ಎಂದರೆ ಸಾಕ್ಷಿಯು ನಾನು ಪೋಲೀಸರಿಗೆ ಆ ರೀತಿ ಹೇಳಿಕೆ ಕೊಟ್ಟಿಲ್ಲ ಎನ್ನುತ್ತಾರೆ.

**ಮಾನ್ಯ ಸ.ಸ.ಅ ರವರು ಯರಿಯಪ್ಪ ತಂದೆ ನಾಗಪ್ಪ ರವರನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡುವ ಅವಶ್ಯಕತೆ ಇದೆ, ಮತ್ತು ಕಲಂ.319 ಸಿ.ಆರ್.ಪಿ. ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕಾಗಿದೆ ಎಂದು ತಿಳಿಸಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**